ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 02-06-2017.

**<u>ಪಾಟೀ ಸವಾಲು ಃ-</u> ಶ್ರೀ ಸಿ.ಎಸ್.ಡಿ. ವಕೀಲರಿಂದ**

ಈ ದಾವೆಯನ್ನು ಸ್ವಾಧೀನವನ್ನು ಕೋರಿ ಸಲ್ಲಿಸಿರುತ್ತೇನೆ. ಪ್ರತಿವಾದಿಗಳು 5-6 ವರ್ಷಗಳ ಹಿಂದೆ ದಾವಾ ಸ್ವತ್ತನ್ನು ಅತಿಕ್ರಮಣ ಮಾಡಿಕೊಂಡಿರುತ್ತಾರೆ. ಅತಿಕ್ರಮಣ ಮಾಡಿಕೊಂಡ ಸಮಯದಲ್ಲಿ ನಾನು ಮಾದಾಪುರಕ್ಕೆ ಹೋಗಿದ್ದೆ. ಅತಿಕ್ರಮಣ ಮಾಡಿದ್ದ 2-3 ದಿನಗಳಲ್ಲಿ ಅತಿಕ್ರಮಣ ಮಾಡುವ ವಿಚಾರ ತಿಳಿಯಿತು. ಈ ಸಂಬಂದ ನಾನು ಪೊಲೀಸ್ ಠಾಣೆಗೆ ಹೋಗಿದ್ದು, ಠಾಣೆಯಲ್ಲಿ ಪ್ರತಿವಾದಿಗಳ ಪರವಾಗಿ ಡಿಕ್ರಿಯಾಗಿದೆ ಎಂದು ಪಿರ್ಯಾದಿ ಸ್ವೀಕರಿಸಲಿಲ್ಲ.

ಪ್ರತಿವಾದಿಗಳು ನನ್ನ ವಿರುದ್ದ ಅಸಲು ದಾವಾ ಸಂಖ್ಯೆ 154/2009 ನ್ನು ದಾವಾ ಸ್ವತ್ತಿಗೆ ತೊಂದರೆ ನೀಡುತ್ತಿದ್ದೇನೆಂದು ದಾವಾ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿದೆ ಎಂದರೆ ಸರಿ. ಸದರಿ ಜಡ್ಜ್‌ಮೆಂಟ್ ಮತ್ತು ಡಿಕ್ರಿ ವಿರುದ್ದ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದೆ ಎಂದರೆ ಸರಿ. ದಾವಾ ಸ್ವತ್ತು ಪ್ರತಿವಾದಿಗಳಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಸ್ವತ್ತನ್ನು ಪ್ರತಿವಾದಿಗಳು ಅದರ ಹಿಂದಿನ ಮಾಲೀಕರಾದ ಸಿ.ಚಿದಂಬರಂ ರವರಿಂದ ಸಿ.ವಿ. ಮಂಜಪ್ಪ ಹಾಗೂ ಸಿ.ವಿ.ಮಂಜಪ್ಪ ರವರಿಂದ 2005ನೆ ಸಾಲಿನಲ್ಲಿ ಕ್ರಯಕ್ಕೆ ಪಡೆದಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿಗಳಿಗಿಂತ ಮೊದಲು ನಾನು ಸಹ ಚಿದಂಬರಂ ರವರಿಂದಲೇ ಕ್ರಯಕ್ಕೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ಕ್ರಯಕ್ಕೆ ಪಡೆದ ನಂತರ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು, ನಾನು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದೇನೆ ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ಈಗ್ಗೆ 11 ವರ್ಷಗಳ ಹಿಂದೆ ಕಟ್ಟಿರುತ್ತೇನೆ. ಮನೆ ಕಟ್ಟಿರುವ ಬಗ್ಗೆ ಲೈಸೆನ್ಸ್ ಪಡೆದಿಲ್ಲ. ಸದರಿ ಮನೆಗೆ ನಾನು ವಿದ್ಯುತ್ಶ್ಕ್ತಿ ಸಂಪರ್ಕ ಪಡೆದಿಲ್ಲ. ದಾವಾ ಸ್ವತ್ತು ಮೂಲತಃ ಕಂದಾಯದ ಜಮೀನು ಎಂದರೆ ಸರಿ. ಸದರಿ ಚಿದಂಬರಂ ರವರು ಹಲವಾರು ಜನರಿಗೆ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ಸಂಪೂರ್ಣ ಬಡಾವಣೆಯನ್ನು ಸದರಿ ಚಿದಂಬರಂ ರವರು ಎರಡು ಬಾರಿ ನಕ್ಷೆಯನ್ನು ತಯಾರಿಸಿ ಒಂದೊಂದು ಸೈಟ್‌ನ್ನು ಇಬ್ಬಬ್ಬರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಈ ಸಂಬಂದ ಹಲವಾರು ಸಿವಿಲ್ ದಾವೆಗಳು ಚಾಲ್ತಿಯಲ್ಲಿವೆ ಎಂದರೆ ಗೊತ್ತಿಲ್ಲ.

ಸದರಿ ಚಿದಂಬರಂ ರವರು ನನಗೆ ತಪ್ಪು ಜಾಗವನ್ನು ತೋರಿಸಿ ಒಂದು ಚಕ್ ಬಂದಿಯನ್ನು ಸೃಷ್ಟಿಸಿ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಪ್ರತಿವಾದಿ ಆ ರೀತಿ ಸೃಷ್ಟಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಪೂರ್ವಕ್ಕೆ ಜವರೇಗೌಡ ರವರ ಮನೆ ಎಂದರೆ ಸಾಕ್ಷಿಯು ಜವರೇಗೌಡ ರವರಿಗೆ ಸೇರಿದ ಸೈಟ್ 12 ಇದೆ ಎಂದು ನುಡಿಯುತ್ತಾರೆ. ಸದರಿ ಸೈಟ್ ನಂ.12 ಖಾಲಿ ಇದೆ. ಸದರಿ ಸೈಟ್ ನಂ.12 ರಲ್ಲಿ ಜವರೇಗೌಡ ರವರು ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವಾ ಸ್ವತ್ತಿನ ಪೂರ್ವಭಾಗದ ನಿವೇಶವನ್ನು ಸತ್ಯನಾರಾಯಣ ರವರಿಗೆ ಚಿದಂಬರಂ ರವರು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸತ್ಯನಾರಾಯಣ ರವರು ನವೀನ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನವೀನ್ ಮತ್ತು ಜವರೇಗೌಡ ರವರ ಎರಡು ಸ್ವತ್ತು ಒಂದೇ ಎಂದು ನುಡಿಯುತ್ತಾರೆ.

ಸದರಿ ಜವರೇಗೌಡ ರವರು ತಾನು ಚಿದಂಬರಂ ರವರಿಂದ ಕ್ರಯಕ್ಕೆ ಪಡೆದ ನಿವೇಶನ ದಕ್ಕದಿರುವ ಕಾರಣ ನವೀನ್ ರವರ ಸೈಟ್‌ನ್ನು ಅತಿಕ್ರಮಣ ಮಾಡಿಕೊಂಡಿರುತ್ತಾರೆ ಎಂದರೆ ಸದರಿ ಸ್ವತ್ತೌ ಬೇರೆ ನಂಬರ್ ನಿವೇಶನ ಇರುತ್ತದೆ ಎಂದು ನುಡಿಯತ್ತಾರೆ. ಸದರಿ ಅತೀಕ್ರಮಣ ಆದ ನಂತರ ಜವರೇಗೌಡ ರವರು ನವೀನ್ ರವರ ಜೊತೆ ರಾಜಿ ಮಾಡಿಕೂಂಡು ಜವರೇಗೌಡ ರವರು ಮನೆ ಕಟ್ಟಿಕೂಂಡಿದ್ದಾರೆ ಎಂದರೆ ಸರಿಯಲ್ಲ.

ನನ್ನ ಕ್ರಯಪತ್ರದಲ್ಲಿ ಪೂರ್ವಕ್ಕೆ ಜವರೇಗೌಡ ರವರ ಸ್ವತ್ತು ಬರೆದುಕೊಟ್ಟಿರುವ ಕಾರಣ ಹಾಗೂ ಜವರೇಗೌಡ ರವರು ನವೀನ್ ರವರ ಸ್ವತ್ತನ್ನು ಅತಿಕ್ರಮಣ ಮಾಡಿಕೊಂಡಿರುವ ಕಾರಣ ಸದರಿ ಜವರೇಗೌಡ ರವರ ಪಶ್ಚಿಮಕ್ಕೆ ಇರುವ ಸ್ವತ್ತು ನನ್ನದು ಎಂದು ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಚಿದಂಬರಂ ರವರು ಮಾರಾಟ ಮಾಡಿದ ಮೇಲೆ ಸದರಿ ಚಿದಂಬರಂ ರವರ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸಾಕ್ಷಿಯು ನಮ್ಮ ಸ್ವತ್ತಿನಲ್ಲಿ ನಾವೆ ಇದ್ದೇವೆ ಎಂದು ನುಡಿಯತ್ತಾರೆ.

**ಈ ಹಂತದಲ್ಲಿ ಸಾಕ್ಷಿಯು ನನ್ನಿಂದ ಪಾಟೀ ಸವಾಲಿಗೆ ಒಳಪಡಿಸಿಕೊಳ್ಳಲು ಆರೋಗ್ಯ ಸರಿ ಇಲ್ಲ ಎಂದು ಹೇಳಿದ್ದ ಕಾರಣ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

**ಅಧಿಕ ಸಿವಿಲ್ ನ್ಯಾಯಾಧೀಶರು.**